ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ- 13 / ಪಿ.ಡಬ್ಲ್ಯೂ- 08

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 18-08-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಮಾರುತಿ ಉಪ್ಪಾರ |
| ತಂದೆಯ ಹೆಸರು - | ಗೊವಿಂದಪ್ಪ ಉಪ್ಪಾರ |
| ವಯಸ್ಸು - | 31 ವರ್ಷಗಳು |
| ಉದ್ಯೋಗ - | ವ್ಯಾಪಾರ |
| ವಾಸಸ್ಥಳ - | ಸಿಗ್ಗನಹಳ್ಳಿ, ಹೆಚ್.ಬಿ.ಹಳ್ಳಿ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಮೃತ ದುರ್ಗೇಶ ನನ್ನ ತಮ್ಮ. ಚಾಸಾ 2 ನನ್ನ ಮೃತ ತಮ್ಮನ ಸ್ನೇಹಿತನು. ದಿಃ 15.08.2023 ರಂದು ಗುಂಡಾ ಫಾರೆಸ್ಟ್ ಹತ್ತಿರ ಟಿಬಿ ಡ್ಯಾಂ ನೋಡಿಕೊಂಡು ವಾಪಸ್ಸು ಶನಿಮಹತ್ಮಾ ದೇವಸ್ಥಾನದ ಹತ್ತಿರ ವಾಟರ್ ಟ್ಯಾಕ್ ಬಳಿ ಚಾಸಾ 2 ಹಾಗೂ ಮೃತ ದುರ್ಗೇಶ ರವರು ಮೊ.ಸೈ ನಲ್ಲಿ ಬರುತ್ತಿರುವಾಗ ರಸ್ತೆಯ ಎಡಭಾಗದಿಂದ ಒಂದು ಇನೊವಾ ಕಂಪನಿಯ ಕಾರ್ ವೇಗವಾಗಿ ಬಂದು ನನ್ನ ತಮ್ಮನ ಮೊ.ಸೈ ನ್ನು ಓವರ್ ಟೇಕ್ ಮಾಡಿ ಮುಂದೆ ಏಕಾಏಕೀ ಬ್ರೇಕ್ ಹಾಕಿ ನಿಂತಿರುತ್ತದೆ, ಹೀಗಾಗಿ ನಿಯಂತ್ರಣ ಸಿಗದೆ ನನ್ನ ತಮ್ಮ ಇದ್ದ ಮೊ.ಸೈ ಸದರಿ ಇನೊವಾ ಕಾರ್ ಗೆ ಡಿಕ್ಕಿ ಹೊಡೆದಿರುತ್ತದೆ. ಸದರಿ ಮೊ.ಸೈ ನ್ನು ನನ್ನ ತಮ್ಮ ಮೃತ ದುರ್ಗೇಶ ಚಾಲನೆ ಮಾಡುತ್ತಿದ್ದರು. ಈ ಬಗ್ಗೆ ವಿಷಯವನ್ನು ನನ್ನ ಮೃತ ತಮ್ಮ ಹಾಗೂ ಚಾಸಾ 2 ರವರು ತಿಳಿಸಿರುತ್ತಾರೆ. ಹೀಗೆ ಅಪಘಾತ ಆದ ನಂತರ ಕಾರ್ ನಲ್ಲಿ ಇದ್ದ ವ್ಯಕ್ತಿ ನನ್ನ ತಮ್ಮನಿಗೆ ಬೈಯಲು ಬಂದಿರುತ್ತಾರೆ ಆಗ ಸುತ್ತ ಮುತ್ತಲಿನ ಜನರು ಕಾರ್ ನಲ್ಲಿ ಇದ್ದ ವ್ಯಕ್ತಿಗಳಿಗೆ ನಿಮ್ಮ ತಪ್ಪಿನಿಂದ ಹೀಗೆ ಆಗಿರುತ್ತದೆ ಎಂದು ಹೇಳಿದಕ್ಕೆ ಕಾರ್ ಸಮೇತ ಆ ವ್ಯಕ್ತಿ ಸ್ಥಳದಿಂದ ಹೋಗಿರುತ್ತಾರೆ. ಚಾಸಾ 2 ರವರು ಮೂರ್ಚೆ ತಪ್ಪಿದ್ದರು ನಾನು ಸ್ಥಳಕ್ಕೆ ಹೋಗಿ ಅವರನ್ನು ಎಚ್ಚರಿಸಿದೆ. ನನ್ನ ತಮ್ಮ ಎಚ್ಚರವಾಗಿದ್ದ ಇದ್ದ. ನನ್ನ ತಮ್ಮನ ತಲೆಯ ಹಿಂಭಾಗ, ಎಡಭುಜದ ಹತ್ತಿರ ರಕ್ತಗಾಯವಾಗಿತ್ತು. ಅವರ ಎದೆಯ ಮೇಲೆ ಎಲ್ಲಾ ಗಾಜಿನ ಚೂರುಗಳು ಇದ್ದವು. ಅವನ ಎಡ ತೊಡೆಯ ಮೂಳೆ ಮುರಿದು ಆಚೆ ಬಂದಿತ್ತು. ಅಪಘಾತ ಆಗುವಾಗ ನಾನು ಸ್ಥಳದಲ್ಲಿ ಇರಲಿಲ್ಲ, ಸ್ಥಳದಲ್ಲಿ ಇದ್ದ ಸಾರ್ವಜನಿಕರು ನನಗೆ ಕರೆ ಮಾಡಿ ವಿಷಯ ತಿಳಿಸಿದರು. ನಂತರ ನಾನು ಮತ್ತು ಚಾಸಾ 14 ರವರು ಸ್ಥಳಕ್ಕೆ ಹೋಗಿ ಅಲ್ಲಿಂದ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ವೈದ್ಯರು ಪ್ರಾಥಮಿಕ ಚಿಕಿತ್ಸೆ ಕೊಟ್ಟು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ

ಕಿಮ್ಸ್ ಆಸ್ಪತ್ರೆ ಕಳುಹಿಸಿದರು. ಹೀಗೆ ಹುಬ್ಬಳ್ಳಿಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ ನನ್ನ ತಮ್ಮ ಮೂರ್ಚೆ ಹೋದ. ಮರುದಿನ ನನ್ನ ತಮ್ಮನನ್ನು ಪರೀಕ್ಷೆಗೆ ಒಳಪಡಿಸಿ ಅವನ ಮೆದುಳು ಕೆಲಸ ಮಾಡುತ್ತಿಲ್ಲ ವೈಧ್ಯರು ತಿಳಿಸಿ ಅವನು ಉಳಿಯುವುದಿಲ್ಲ ಎಂದು ಹೇಳಿದರು. ಅಲ್ಲಿಯವರೆಗೂ ನಾವು ಇನ್ನೂ ದೂರು ದಾಖಲಿಸದೆ ಇದ್ದ ಕಾರಣ ನನ್ನ ಮಾವ ಚಾಸಾ 1 ರವರಿಗೆ ದೂರು ಕೊಡಲು ನಾವು ತಿಳಿಸಿದೆವು. ಅಪಘಾತ ಮಾಡಿದ ಕಾರ್ ಬಿಳಿ ಬಣ್ಣದ ಇನೋವಾ ಕಾರ್ ನಂಃ ಕೆಎ 37 ಎನ್ 7789 ಆಗಿದ್ದು ಅದರ ಮಾಲೀಕರು ಕೆ.ರಾಮಾರಾವ್ ಎಂದು ನಮಗೆ ತಿಳಿಯಿತು. ಸದರಿ ವಾಹನದ ಮಾಲೀಕರ ಬಗ್ಗೆ ನನಗೆ ಪೊಲೀಸ್‌ರ ಮುಖಾಂತರ ತಿಳಿಯಿತು. ಅಪಘಾತ ಆದಾಗ ಸ್ಥಳದಲ್ಲಿ ಇದ್ದ ಸಾರ್ವಜನಿಕರಲ್ಲಿ ಒಬ್ಬರು ನನ್ನ ತಮ್ಮನ ಮೊಬೈಲ್ ನಿಂದ ಕಾರ್ ನ ಭಾವಚಿತ್ರವನ್ನು ತೆಗೆದು ನಾನು ಸ್ಥಳಕ್ಕೆ ಹೋದಾಗ ನನಗೆ ತೋರಿಸಿದರು. ಹೀಗಾಗಿ ನನಗೆ ಸದರಿ ಕಾರ್ ನ ಬಗ್ಗೆ ನನಗೆ ಮಾಹಿತಿ ಇದೆ.

ದಿಃ 18.08.2023 ರಂದು ಪೊಲೀಸ್‌ರು ಮತ್ತೊಮ್ಮೆ ನನಗೆ ಕರೆ ಮಾಡಿ ಅಪಘಾತದ ಸ್ಥಳವನ್ನು ತೋರಿಸಲು ನನಗೆ ಹೇಳಿದರು. ನಾನು ಸ್ಥಳಕ್ಕೆ ಹೋದೆ. ಅಲ್ಲಿ ನನ್ನ ಜೊತೆ ಚಾಸಾ 1, 9 ಮತ್ತು 10 ರವರು ಇದ್ದರು. ಆಗ ಸಮಯ ಸಂಜೆಯಾಗಿತ್ತು. ನಾನು ಅಪಘಾತವಾದ ಸ್ಥಳವನ್ನು ತೋರಿಸಿದೆ. ಪೊಲೀಸ್‌ರು ಸ್ಥಳದಲ್ಲಿ ಭಾವಚಿತ್ರ ತೆಗೆದು ಹಾಗೂ ಒಂದು ದಾಖಲೆಯನ್ನು ತಯಾರಿಸಿ ನಮ್ಮ ಸಹಿಯನ್ನು ಪಡೆದಿರು. ಸಾಕ್ಷಿ ನಿಪಿ 2 ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ-2 ಡಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 4 ಮತ್ತು 5 ಭಾವಚಿತ್ರಗಳಲ್ಲಿ ತನ್ನನ್ನು ಹಾಗೂ ಘಟನಾ ಸ್ಥಳವನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಠಾಣೆಗೆ ಹತ್ತಿರ ಬರಲು ನಮಗೆ ತಿಳಿಸಿದರು. ನಾನು ಠಾಣೆಗೆ ಹೋದಾಗ ಪೊಲೀಸ್‌ರು ಅಲ್ಲಿ ಯಮಹಾ ಅರ್ ಎಕ್ಸ್ ಮೊ.ಸೈ ನ್ನು ತೋರಿಸಿದರು. ನಾನು ಅದನ್ನು ಗುರುತಿಸಿದೆ. ಅಲ್ಲಿ ಪೊಲೀಸ್‌ರು ಭಾವಚಿತ್ರವನ್ನು ತೆಗೆಸಿ ನನ್ನ ಸಹಿ ಪಡೆದರು. ಸಾಕ್ಷಿ ನಿಪಿ 6 ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ 6 ಡಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 7 ಮತ್ತು 8 ಭಾವಚಿತ್ರದಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಂದುವರೆದು ಠಾಣೆಯಲ್ಲಿಯೇ ಅಪಘಾತ ಪಡೆಸಿದ ಕಾರ್ ಚಾಲಕನ

ಭಾವಚಿತ್ರವನ್ನು ಠಾಣೆಯಲ್ಲಿ ಇದ್ದ ಯಾವುದೇ ವ್ಯಕ್ತಿ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಈ ರೀತಿ ಅಪಘಾತ ಪಡೆಸಿದ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

<u>ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದ-</u>

ಅಪಘಾತ ಆಗಿದೆ ಎಂದು ಹೇಳಲಾದ ಸಮಯದಲ್ಲಿ ನಾನು ಹಿಟ್ನಾಳ ಗ್ರಾಮದಲ್ಲಿ ಇದ್ದೆ. ಹಿಟ್ನಾಳ ಗ್ರಾಮ ಘಟನಾ ಸ್ಥಳ ಅಂದಾಜು 15 ಕಿ.ಮೀಟರ ದೂರದಲ್ಲಿ ಇದೆ. ಈ ರೀತಿ ಹಿಟ್ನಾಳ ಗ್ರಾಮದಿಂದ ಘಟನಾ ಸ್ಥಳಕ್ಕೆ ಬರಲು ಅಂದಾಜು 20 ನಿಮಿಷ ಸಮಯ ಆಗಬಹುದು. ನನ್ನ ತಮ್ಮ ಚಲಾಯಿಸುತ್ತಿದ್ದ ಯಮಹಾ ಮೊ.ಸೈ ನ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ತಮ್ಮನ ಬಳಿ ಚಾಲನಾ ಪರವಾನಿಗೆ ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಮ್ಮ ಮೇಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನಗೆ ಮಾಹಿತಿ ಇರುವಂತೆ ಆ ದಿನ ಟಿಬಿ ಡ್ಯಾಂ ಗೆ ನನ್ನ ತಮ್ಮ ಹಾಗೂ ಚಾಸಾ 2 ಇಬ್ಬರು ಮಾತ್ರ ಮೊ.ಸೈ ನಲ್ಲಿ ಬಂದಿದ್ದರು. ದಿಃ 15.08.2023 ರಂದು ಸ್ವತಂತ್ರ್ಯ ದಿನಾಚರಣೆ ಇತ್ತು ಎಂದರೆ ಸರಿ. ನನ್ನ ತಮ್ಮನ ಜೊತೆ ಇನ್ನೂ ಎಷ್ಟು ಜನ ಸ್ನೇಹಿತರು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ನನ್ನ ತಮ್ಮನ ಸ್ನೇಹಿತರ ಎಷ್ಟು ಬೈಕ್ ಗಳು ಅಲ್ಲಿ ಇದ್ದವು ಎಂದರೆ ಸಾಕ್ಷಿ ಅಲ್ಲಿ ನನ್ನ ತಮ್ಮನ ಸ್ನೇಹಿತರ ಬೈಕ್ ಗಳು ಇರಲಿಲ್ಲ ನನ್ನ ತಮ್ಮನ ಬೈಕ್ ಮಾತ್ರ ಕೆಳಗೆ ಬಿದ್ದಿತ್ತು ಹಾಗೂ ಸಾರ್ವಜನಿಕರು ಅಲ್ಲಿ ಇದ್ದರು ಎಂದು ನುಡಿಯುತ್ತಾರೆ.

ಸದರಿ ಘಟನೆಯ ದಿನದಿಂದ ಸುಮಾರು 15 ರಿಂದ 20 ವರ್ಷಗಳ ಹಿಂದೆ ಯಮಹಾ ಅರ್ ಎಕ್ಸ್ ವಾಹನ ಭಾರತದ ರಸ್ತೆಯಲ್ಲಿ ಓಡಾಡಲು ಸರಿ ಇಲ್ಲ ಹಾಗೂ ಸದರಿ ವಾಹನದಲ್ಲಿ ತಾಂತ್ರಿಕ ದೋಷ ಇದೆ ಎಂದು ಬ್ಯಾನ್ ಆಗಿತ್ತು ಎಂದರೆ ಇರಬಹುದು. ಆ ದಿನ ನನ್ನ ತಮ್ಮ ಹಾಗೂ ಅವನ ಸ್ನೇಹಿತರು ಟಿಬಿ ಡ್ಯಾಂ ನೋಡಲು ಬಂದಿದ್ದರು. ಟಿಬಿ ಡ್ಯಾಂ ಮುಖ್ಯ ದ್ವಾರವನ್ನು ದಾಟಿದ ನಂತರ ಘಟನಾ ಸ್ಥಳವು ಸುಮಾರು 2 ಕಿ.ಮೀಟರ್ ದೂರದಲ್ಲಿ ಇದೆ ಎಂದರೆ ಸರಿ. ಘಟನಾ ಸ್ಥಳ ರಾಷ್ಟ್ರಿಯ ಹೆದ್ದಾರಿ ಎಂದರೆ ಸರಿ. ಅಲ್ಲಿ ಹೊಸಪೇಟೆಯಿಂದ ಹೋಗಲು ಮತ್ತು ಹೊಸಪೇಟೆಗೆ ಬರಲು ಎರಡು ದಾರಿಗಳು ಇವೆ ಎಂದರೆ ಸರಿ. ಶನಿಮಹತ್ಮಾ ದೇವಸ್ಥಾನದ ಹತ್ತಿರ ಸಹ ಇದೇ ರೀತಿ ಡಾಬಂರ್ ರಸ್ತೆ ಇದೆ ಎಂದರೆ ಸರಿ. ಘಟನಾ ಸ್ಥಳ ಶನಿಮಹತ್ಮಾ ದೇವಸ್ಥಾನದಿಂದ ಬರುವ ರಸ್ತೆ

ಹಾಗೂ ಟನಲ್ ನ ಒಂದು ಭಾಗದ ರಸ್ತೆ ಕೂಡುವ ಸ್ಥಳ ಎಂದರೆ ಸಾಕ್ಷಿ ಸದರಿ ಘಟನಾ ಸ್ಥಳ ಹೀಗೆ ಎರಡು ರಸ್ತೆಗಳು ಕೂಡುವ ಸ್ಥಳದಿಂದ ಸುಮಾರು 1 ಕಿ.ಮೀಟರ್ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ಈ ರೀತಿ ರಸ್ತೆಗಳು ಕೂಡಿದ ಸ್ಥಳದಲ್ಲಿ ಎಂ.ಎಂ.ಹಳ್ಳಿಯಿಂದ ಹೊಸಪೇಟೆ ಗೆ ಬರುವ ರಸ್ತೆಯ ಎಡಭಾಗದಲ್ಲಿ ಅರ್.ಟಿ.ಓ ಚೆಕ್ ಪೋಸ್ಟ್ ಇದೆ ಎಂದರೆ ಸರಿ. ಈ ಅಪಘಾತ ಆರ್.ಟಿ.ಓ ಚೆಕ್ ಪೋಸ್ಟ್ ಬಳಿ ಆಗಿರುತ್ತದೆ ಎಂದರೆ ಸಾಕ್ಷಿ ಸ್ವಲ್ಪ ಮುಂದೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಬೆಳ್ಳಿಗ್ಗೆಯಿಂದ ರಾಷ್ಟ್ರಿಯ ಹೆದ್ದಾರಿಗಳಲ್ಲಿ ವಾಹನಗಳ ಓಡಾಟ ಇರುತ್ತದೆ ಎಂದರೆ ಸರಿ. ಆ ದಿನ ಸ್ವತಂತ್ರ್ಯ ದಿನಾಚರಣೆ ಇದ್ದರಿಂದ ಸಾಮಾನ್ಯಕ್ಕಿಂತ ಹೆಚ್ಚಿನ ವಾಹನಗಳ ಓಡಾಟ ಇತ್ತು ಎಂದರೆ ಸರಿ. ಆ ದಿನ ಟನಲ್ ಹಾಗೂ ಗುಂಡಾ ಫಾರೆಸ್ಟ್ ನೋಡಲು ಹೆಚ್ಚಿನ ಜನ ಬರುತ್ತಾರೆ ಎಂದರೆ ಸರಿ. ನಿಪಿ 7 ಮತ್ತು 8 ಭಾವಚಿತ್ರಗಳಲ್ಲಿ ಕಾಣುವ ಮೊ.ಸೈ ನ್ನು ನನ್ನ ತಮ್ಮ ಚಲಾಯಿಸುತ್ತಿದ್ದ ಎಂದರೆ ಸರಿ. ಸದರಿ ವಾಹನದ ಹ್ಯಾಂಡಲ್ ಹಾಗೂ ಮುಂದಿನ ಗಾಲಿ ಬೆಡ್ ಆಗಿದೆ ಎಂದರೆ ಸರಿ. ಸದರಿ ಮೊ.ಸೈ ನ ಹಿಂಭಾಗದಲ್ಲಿ ಜಖಂ ಆಗಿರುವ ಬಗ್ಗೆ ಸದರಿ ಭಾವಚಿತ್ರಗಳಲ್ಲಿ ಕಾಣುವುದಿಲ್ಲ. ಸಾಕ್ಷಿಗೆ ನಿಪಿ 9 ಮತ್ತು 10 ಭಾವಚಿತ್ರಗನ್ನು ತೋರಿಸಿ ಸದರಿ ವಾಹನಕ್ಕೆ ನನ್ನ ತಮ್ಮ ಮೊ.ಸೈ ನ್ನು ಹಿಂದಿನಿಂದ ಗುದ್ದಿರುತ್ತಾನೆ ಎಂದರೆ ಸಾಕ್ಷಿ ಅದನ್ನು ಒಪ್ಪುತ್ತಾರೆ. ನಾನು ಹೇಳಿದಂತೆ ನನ್ನ ತಮ್ಮ ಮೊ.ಸೈ ನ ಮುಂದಿನ ಗಲಿ ಬೆಡಾಗುವಂತೆ ಸದರಿ ಕಾರ್ ನ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದ್ದರೆ, ಈ ಕಾರ್ ನ ಡಿಕ್ಕಿ ಜಖಂ ಆಗುತ್ತಿತ್ತು ಎಂದರೆ ಸಾಕ್ಷಿ ಆಗಬಹುದು ಎಂದು ನುಡಿಯುತ್ತಾರೆ. ನಿಪಿ 9 ಮತ್ತು 10 ಭಾವಚಿತ್ರಗಳಲ್ಲಿ ಕಾಣುವ ಕಾರಿನ ಹಿಂಭಾಗ ಅಂದರೆ ಡಿಕ್ಕಿ ಜಖಂ ಗೊಂಡಿರುತ್ತದೆಯೆ ಎಂದರೆ ಅವುಗಳನ್ನು ನೋಡಿ ಜಖಂ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕಾರ್ ನ ಹಿಂದಿನ ಗಾಜು ಮಾತ್ರ ಜಖಂ ಆಗಿರುತ್ತದೆ, ಅದರ ಡಿಕ್ಕಿ ಅಲ್ಲ ಎಂದರೆ ಸಾಕ್ಷಿ ಎರಡು ಜಖಂ ಆಗಿರುತ್ತವೆ ಎಂದು ನುಡಿಯುತ್ತಾರೆ.

ನನ್ನ ತಮ್ಮ ವಿಲಿಂಗ್ ಮಾಡುತ್ತಾ ಮೊ.ಸೈ ಚಲಾಯಿಸುತ್ತಿದ್ದರಿಂದ ಈ ಅಪಘಾತ ಆಗಿ ಕಾರಿನ್ ಹಿಂಭಾಗದ ಗಾಜು ಮಾತ್ರ ಹೊಡೆದಿದೆ ಅದರ ಡಿಕ್ಕಿ ಅಲ್ಲ ಎಂದರೆ ಸರಿಯಲ್ಲ. ವಿಮೆ ಪರಿಹಾರದ ಹಣ ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ- **13** / ಪಿ.ಡಬ್ಲ್ಯೂ- **08**

ಸರಿಯಲ್ಲ. ನಾನು ಪೊಲೀಸ್‌ರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನನ್ನ ಹೇಳಿಕೆಯಲ್ಲಿ "ಅಲ್ಲಿ ಇದ್ದ ಜನರು ಕಾರ್ ಚಾಲಕನಿಗೆ ನಿಮ್ಮದು ಏನು ತಪ್ಪು ಇಲ್ಲ ಎಂದು ತಿಳಿಸಿದ್ದರಿಂದ ಕಾರ್ ಚಾಲಕನು ಕಾರ್ ಚಲಾಯಿಸಿಕೊಂಡು ಹೊರಟು ಹೋದನು ಎಂದು ಹೇಳಿರುತ್ತೇನೆ" ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಹೇಳಿಕೆಯನ್ನು ನಿಡಿ 1 ಎಂದು ಗುರುತಿಸಲಾಯಿತು.

ಹೀಗಾಗಿ ಸ್ಥಳದಲ್ಲಿ ಇದ್ದ ಜನರು ಕಾರ್ ಚಾಲಕನ ತಪ್ಪಿನಿಂದ ಈ ಅಪಘಾತ ಆಗಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಸಾರ್ವಜನಿಕರು ಕಾರ್ ಚಾಲಕನಿಗೆ ಬೈದು ಅವನ ಭಾವಚಿತ್ರವನ್ನು ತೆಗೆದಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸ್‌ರು ಸ್ಥಳ ಪಂಚನಾಮೆ ಜರುಗಿಸದೆ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಆರ್.ಟಿ.ಓ ಚೆಕ್ ಪೋಸ್ಟ್ 50 ಮೀಟರ್ ದೂರದಲ್ಲಿ ಇದೆ ಎಂದರೆ ಸಾಕ್ಷಿ 1/2 ಕಿ.ಮೀಟರ್ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ವಾಹನ ಜಪ್ತು ಪಂಚನಾಮೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ವಿಲಿಂಗ್ ಮಾಡುತ್ತಾ ಸದರಿ ಕಾರ್ ಗೆ ಡಿಕ್ಕಿ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಈ ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಆದ ಗಾಯಗಳು ವಿಲಿಂಗ್ ಮಾಡುತ್ತಿರುವಾಗ ಹ್ಯಾಂಡಲ್ ಗೆ ತಗುಲಿ ಕೆಳಗೆ ಬಿದ್ದರಿಂದ ಆಗಿರುತ್ತವೆ, ಕಾರ್ ಚಾಲಕನ ತಪ್ಪಿನಿಂದ ಅಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೆ ಇದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.